# ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

## ದಿನಾಂಕ 16-08-2011 ರಂದು ಸಂಜೆ 4.30 ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳು

### ಅಧ್ಯಕ್ಷರ ಅಪ್ಪಣೆ ಮೇರೆ ಗೆ ಚರ್ಚಿಸಿದ ಇತರೆ ವಿಷಯಗಳು

* * * * *

**ವಿಷಯ ಸಂಖ್ಯೆ 01** ದಿನಾಂಕ 04-08-2011 ರಂದು ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯ ನಡೆವಳಿಗಳನ್ನು ಓದಿ ದಾಖಲಿಸುವ ಬಗ್ಗೆ.

**ಟಿಪ್ಪಣಿ** ದಿನಾಂಕ 04-08-2011 ರಂದು ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯ ನಡೆವಳಿಗಳನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ದಿನಾಂಕ 04-08-2011 ರಂದು ನಡೆದ ಪ್ರಾಧಿಕಾರದ ಸಭೆಯ ನಡುವಳಿಗಳನ್ನು ಓದಿ ದಾಖಲು ಮಾಡಲಾಯಿತು.

**ವಿಷಯ ಸಂಖ್ಯೆ 02** ತುಮಕೂರು ಅಮಾನಿಕೆರೆ ಸಮಗ್ರ ಅಭಿವೃದ್ಧಿ ಯೋಜನೆ ಕಾಮಗಾರಿಯ ಪ್ರಗತಿಯ ವಿವರ (ಜುಲೈ 2011 ರ ಮಾಹೆಯ ಅಂತ್ಯಕ್ಕೆ ಸಾಧಿಸಿದ ಆರ್ಥಿಕ ಹಾಗೂ ಭೌತಿಕ ಪ್ರಗತಿ)

**ಟಿಪ್ಪಣಿ** ತುಮಕೂರು ಅಮಾನಿಕೆರೆ ಅಭಿವೃದ್ಧಿ ಕಾಮಗಾರಿಯನ್ನು ಪ್ರಾರಂಭಿಸಲು ಗುತ್ತಿಗೆದಾರರಾದ ಮೆ॥ ರೆಡ್ಡಿವೀರಣ್ಣ ಕನ್ಸ್‌ಟ್ರಕ್ಷನ್ ಪ್ರೈ. ಲಿ., ಬೆಂಗಳೂರು ಇವರಿಗೆ ಕಾರ್ಯಾದೇಶವನ್ನು ದಿನಾಂಕ 30-09-2009 ರಂದು ಪ್ರಾಧಿಕಾರದಿಂದ ನೀಡಲಾಗಿದೆ. ಗುತ್ತಿಗೆದಾರರು 8-10-2009 ರಂದು ಕಾಮಗಾರಿಯ ಸ್ಥಳವನ್ನು ವಹಿಸಿಕೊಂಡಿರುವರು. ಗುತ್ತಿಗೆದಾರರು ಕಾಮಗಾರಿಯನ್ನು 22-10-2009 ರಂದು ಪ್ರಾರಂಭಿಸಿರುವರು. ಈ ಕಾಮಗಾರಿಯನ್ನು ಗುತ್ತಿಗೆದಾರರು 12 ತಿಂಗಳ ಅವಧಿಯಲ್ಲಿ ಅಂದರೆ ದಿನಾಂಕ 29-09-2010 ರೊಳಗಾಗಿ ಪೂರ್ಣಗೊಳಿಸಬೇಕಾಗಿದ್ದು, ಏಪ್ರಿಲ್ 2010ರ ಮಾಹೆಯಲ್ಲಿ ಬಿದ್ದ ಅಕಾಲಿಕ ಮಳೆಯಿಂದಾಗಿ ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಆದ ಕಾರಣ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆದಾರರು 6 ತಿಂಗಳ ಅವಧಿ ವಿಸ್ತರಣೆಯನ್ನು ಕೋರಿದ್ದು, ಅದರಂತೆ ಅವಧಿ ವಿಸ್ತರಣೆ ಪ್ರಸ್ತಾವನೆಯನ್ನು ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಕೆರೆ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಯುತ ಸಮಿತಿಯ ಸಭೆಯಲ್ಲಿ ಚರ್ಚಿಸಿ ದಿನಾಂಕ 31-03-2011 ರವರೆವಿಗೂ ಅವಧಿ ವಿಸ್ತರಣೆಯನ್ನು ನೀಡಿ ಅನುಮೋದನೆಯನ್ನು ನೀಡಲಾಗಿತ್ತು. ಗುತ್ತಿಗೆದಾರರು ಜುಲೈ 2011ರ ಅಂತ್ಯಕ್ಕೆ ಈ ಕೆಳಕಂಡ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ.

| ಕ್ರ ಸಂ. | ಕಾಮಗಾರಿಯ ಹೆಸರು | ಟೆಂಡರ್ ಪರಿಮಾಣ | ಟೆಂಡರ್ ಮೊತ್ತ ರೂ. ಲಕ್ಷಗಳಲ್ಲಿ | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ ರೂ. ಲಕ್ಷಗಳಲ್ಲಿ |
|---|---|---|---|---|---|
| **1** | **2** | **3** | **4** | **5** | **6** |
| 1 | ಕೆರೆಯ ತಳಭಾಗದಲ್ಲಿರುವ ಹೂಳನ್ನು ತೆಗೆಯುವುದು **(Desilting of tank bed)** | 527996 ಘ.ಮೀ. | 244.04 | 477875 ಘ.ಮೀ. | 220.87 |
| 2 | ಕೆರೆಯ ಏರಿಯನ್ನು ಭದ್ರಪಡಿಸುವುದು ಮತ್ತು ಹುಲ್ಲು ಹಾಸು ನಿರ್ಮಿಸುವುದು **(Strengthening of bund and Grass Turfing )** | | 320.95 | | 278.54 |
| | a ಡಿ.ಸಿ. ಕಛೇರಿ ಮಂಭಾಗದ ಉದ್ಯಾನವನ ಅಭಿವೃದ್ಧಿ **Development of Garden area (Near D.C. Office )** | 131600 ಘ.ಮೀ. | 104.69 | 131600 ಘ.ಮೀ. | 104.68 |
| | b ಕೋತಿತೋಪು ಭಾಗದ ಉದ್ಯಾನವನ ಅಭಿವೃದ್ಧಿ **Development of Garden area (Near Kothi thopu)** | 141281 ಘ.ಮೀ. | 112.64 | 141281 ಘ.ಮೀ. | 112.40 |
| | c ಶಿರಾರಸ್ತೆಯ ಭಾಗದ ಏರಿ, ಬೆಂಗಳೂರು ರಸ್ತೆಯ ಏರಿ ಹಾಗೂ ಕೆರೆಯ ಹಿಂಭಾಗದ ಏರಿಯನ್ನು ಭದ್ರಪಡಿಸುವುದು **(Correction and widening of existing Bund (Sira Road, Bangalore road and Back side bund)** | 81802 ಘ.ಮೀ. | 65.07 | 66339 ಘ.ಮೀ. | 50.52 |
| | d ಶಿರಾರಸ್ತಯ ಏರಿಯ ರಿವಂಟ್‌ಮಂಟ್ ತಗದು ಪುನರ್ ನಿರ್ಮಾಣ ಮಾಡುವುದು **(Removing and Rcconstruction of rough stone Revetment)** | 19500 ಚ.ಮೀ. | 14.92 | 16907 ಚ..ಮೀ. | 10.94 |
| 3 | ತರಿ ಭೂಮಿಯನ್ನು ನಿರ್ಮಿಸುವುದು **(Construction of wet land)** | 2 ಸಂಖ್ಯೆ | 134.92 | | 16.50 |
| | a **Rock fill Bund** ನಿರ್ಮಿಸುವುದು | 6900 ಘ.ಮೀ. | 24.90 | 5191 ಘ.ಮೀ. | 16.13 |
| | b **Filling in Foundation** ನಿರ್ಮಿಸುವುದು | 100 ಘ.ಮೀ. | 0.87 | 42.60 ಘ.ಮೀ. | 0.37 |
| 4 | ಕೊಳಚೆ ನೀರಿನ ಮಾರ್ಗ ಬದಲಾವಣೆ ಹಾಗೂ ಅಭಿವೃದ್ಧಿ ಪಡಿಸುವುದು ಹಾಗೂ ಮುಖ್ಯ ಚರಂಡಿಯನ್ನು ನಿರ್ಮಿಸುವುದು **(Waste water / Storm water drain (Intercept and Diversion Drains and Main Drains)** | | 150.11 | | 127.78 |
| 5 | ಮಳೆ ನೀರು ಹರಿಯುವ ಹಳ್ಳಗಳಿಗೆ ಕಲ್ವರ್ಟ್‌ಗಳನ್ನು ನಿರ್ಮಿಸುವುದು ಹಾಗೂ ಹಳ್ಳಗಳನ್ನು ಅಭಿವೃದ್ಧಿಪಡಿಸುವುದು **(Construction of storm water intake culverts and catchment area improvement )** | 10 ಸಂಖ್ಯೆ | 99.30 | 10 ಸಂಖ್ಯೆ | 41.67 |
| 6 | ಸಿಲ್ಟ್ ಟ್ರಾಪ್ ಮತ್ತು ಸ್ಕ್ರೀನ್ ಬ್ಯಾರಿಯರ್ ನಿರ್ಮಿಸುವುದು **(Construction of Silt trap and Screen Barrier)** | - | 8.49 | - | ಕಾಮಗಾರಿ ಪ್ರಾರಂಭಿಸಬೇಕಿದೆ. |
| 7 | ವಿಗ್ರಹಗಳನ್ನು ವಿಸರ್ಜಿಸಲು ಕಲ್ಯಾಣಿಯನ್ನು ನಿರ್ಮಿಸುವುದು **(Construction of Kalyani for Idol immersion)** | 1 ಸಂಖ್ಯೆ | 30.74 | - | ಕಾಮಗಾರಿ ಪ್ರಗತಿಯಲ್ಲಿದೆ. |
| 8 | ಚೈನ್‌ಲಿಂಕ್ ಫೆನ್ಸಿಂಗ್ ನಿರ್ಮಿಸುವುದು **(Construction of Chain link Fencing )** | 4200 ಮೀ. ಉದ್ದಕ್ಕೆ | 85.54 | - | ಕಾಮಗಾರಿ ಪ್ರಗತಿಯಲ್ಲಿದೆ. |
| 9 | ಕಾಂಕ್ರೀಟ್ ಕಂಬಗಳ ತಂತಿ ಬೇಲಿ ನಿರ್ಮಿಸುವುದು **(Construction of Barbed wire Fencing)** | 1420 ಸಂಖ್ಯೆ (2800 ಮೀ. ಉದ್ದಕ್ಕೆ) | 12.74 | 1420 ಸಂಖ್ಯೆ (2800 ಮೀ. ಉದ್ದಕ್ಕೆ) | 8.33 |
| 10 | ಐಲ್ಯಾಂಡ್ ನಿರ್ಮಿಸುವುದು **(Construction of Island )** | (2 ಸಂಖ್ಯೆ) | 29.62 | (2 ಸಂಖ್ಯೆ) | 24.22 |
| 11 | ಬೋಟಿಂಗ್ ಜಟ್ಟಿ ನಿರ್ಮಿಸುವುದು **(Construction of Boating jetty )** | 2 ಸಂಖ್ಯೆ | 12.27 | (2 ಸಂಖ್ಯೆ) | 7.80 |
| 12 | ಟೋವಾಲ್ ಮತ್ತು ಟೆಂಪ್ಲೇಟ್ ವಾಲ್‌ಗಳನ್ನು ನಿರ್ಮಿಸುವುದು **(Construction of Toewall and Templet)** | 1323.33 ಘ.ಮೀ. | | 512.46 ಘ.ಮೀ. | 7.28 |
| 13 | ಒಡೆದಿರುವ ಕೋಡಿಯನ್ನು ಮುಚ್ಚುವುದು. **(ReConstruction of Waste** | [illegible] ಘ.ಮೀ. | | 94.31 ಘ.ಮೀ. | 2.36 |
| | ಒಟ್ಟು **Total** | | **1128.72** | | **735.35** |

ಗುತ್ತಿಗೆದಾರರು ಜುಲೈ 2011 ರ ಅಂತ್ಯಕ್ಕೆ ರೂ.750.00 ಲಕ್ಷಗಳಷ್ಟು ಆರ್ಥಿಕ ಪ್ರಗತಿಯಾಗಿರುವುದು ಕಂಡುಬಂದಿರುತ್ತದೆ. ಗುತ್ತಿಗೆದಾರರಿಗೆ ಇಲ್ಲಿಯವರೆಗೆ ರೂ.671.88 ಲಕ್ಷಗಳನ್ನು ಪಾವತಿಸಲಾಗಿದೆ. ಗುತ್ತಿಗೆದಾರರು ಮೊದಲನೇ ಅವಧಿ ವಿಸ್ತರಣಾ ಸಮಯದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸದೇ ಇರುವ ಕಾರಣ ಎರಡನೇ ಅವಧಿ ವಿಸ್ತರಣಾ ಪ್ರಸ್ತಾವನೆಯನ್ನು ಇನ್ನೂ 9 ತಿಂಗಳವರೆಗೆ ಅಂದರೆ ದಿನಾಂಕ 31-12-2011 ರವರೆಗೆ ಅವಧಿ ವಿಸ್ತರಣೆ ಕೋರಿ ಗುತ್ತಿಗೆದಾರರು ದಿನಾಂಕ 05-07-2011 ರ ಪತ್ರದಲ್ಲಿ ಕೋರಿರುತ್ತಾರೆ. ಅದರಂತೆ ಪ್ರಸ್ತಾವನೆಯನ್ನು ಕೆರೆ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ದಿನಾಂಕ 05-07-2011 ರಂದು ಪ್ರಾಧಿಕಾರದಿಂದ ಸಲ್ಲಿಸಲಾಗಿದೆ ಹಾಗೂ ದಿನಾಂಕ 08-07-2011 ರ ಕೆರೆ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಯುತ ಸಮಿತಿಯ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗಿದೆ. ಎರಡನೇ ಅವಧಿ ವಿಸ್ತರಣೆಯನ್ನು ಗುತ್ತಿಗೆದಾರರಿಗೆ ದಂಡವನ್ನು ವಿಧಿಸಿ ನೀಡಬಹುದಾಗಿದೆ ಎಂದು ಸೂಚಿಸಿರುತ್ತಾರೆ. ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಮಾಹಿತಿಗಾಗಿ ಮಂಡಿಸಿದೆ.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ಅಮಾನಿಕೆರೆ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವ ಸಂಬಂಧ ಅಗತ್ಯವಾಗಿರುವ ಎಲ್ಲಾ ಕಾಮಗಾರಿಗಳನ್ನು ಕೈಗೊಂಡು ಆಧ್ಯತೆ ಮೇರೆಗೆ ಕಾಮಗಾರಿಗಳನ್ನು ಕೈಗೊಳ್ಳಲು ಗುತ್ತಿಗೆದಾರರಿಗೆ ತಿಳುವಳಿಕೆ ಪತ್ರ ನೀಡುವಂತೆ ಹಾಗೂ ಅಕ್ಟೋಬರ್ 2011 ರೊಳಗಾಗಿ ಪೂರ್ಣಗೊಳಿಸಿ, ಸಾರ್ವಜನಿಕ ಉಪಯೋಗಕ್ಕೆ ಸಮರ್ಪಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 03**

ತುಮಕೂರು ನಗರದಲ್ಲಿ ಗುರುತಿಸಲಾದ ಒಂದು ಎಕರೆಗಿಂತ ಹೆಚ್ಚು ವಿಸ್ತೀರ್ಣವಿರುವ ಉದ್ಯಾನವನಗಳ ಸರಹದ್ದಿಗೆ ಸುತ್ತಲೂ ಬೇಸ್‌ಮೆಂಟ್ ಕಟ್ಟಡ ನಿರ್ಮಾಣ ಮಾಡಿ ನಾಮಫಲಕ ಅಳವಡಿಸುವ ಬಗ್ಗೆ.

**ಟಿಪ್ಪಣಿ**

ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಈಗಾಗಲೇ 41 ಉದ್ಯಾನವನಗಳನ್ನು ಅಭಿವೃದ್ಧಿಗೊಳಿಸಲಾಗಿದ್ದು, 12 ಉದ್ಯಾನವನಗಳನ್ನು ಲ್ಯಾಂಡ್‌ಸ್ಕೇಪ್ ಸೇರಿದಂತೆ ಸಂಪೂರ್ಣವಾಗಿ ಅಭಿವೃದ್ಧಿ ಗೊಳಿಸಲಾಗಿರುತ್ತದೆ. ಈ ಸಂಬಂಧ ರೂ. 4.00 ಕೋಟಿಗಳ ಅಂದಾಜು ವೆಚ್ಚವಾಗಿರುತ್ತದೆ. ಪ್ರಾಧಿಕಾರಕ್ಕೆ ಉದ್ಯಾನವನಗಳು ವಿನಾಯ್ತಿ ಸಂಬಂಧ ಸ್ವೀಕೃತವಾಗುವ ಒಟ್ಟು ಮೊತ್ತವನ್ನು ಮಹಾಯೋಜನೆಯಲ್ಲಿ ಉದ್ಯಾನವನಕ್ಕೆ ಮೀಸಲಿರಿಸಿರುವ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು ಅಭಿವೃದ್ಧಿಪಡಿಸಲು ಬಳಸಬೇಕಾಗಿರುತ್ತದೆ. ಪ್ರಸ್ತುತ ಅಮಾನಿಕೆರೆ ಉದ್ಯಾನವನಕ್ಕೆ ಸುಮಾರು ರೂ.1.5 ಕೋಟಿ ಹಣವನ್ನು ವೆಚ್ಚಮಾಡಲು ಸಭೆಯಲ್ಲಿ ತೀರ್ಮಾನವಾಗಿರುತ್ತದೆ. ಒಟ್ಟಾರೆ ರೂ.6.00 ಕೋಟಿಗಳನ್ನು ಉದ್ಯಾನವನಗಳ ಅಭಿವೃದ್ದಿಗೆ ಬಳಸಿದಂತಾಗುತ್ತದೆ. ಆದುದರಿಂದ ಕೆಳಕಂಡ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲು ಹಣಕಾಸಿನ ಲಭ್ಯತೆಯನ್ನು ಅಧರಿಸಿ ಕ್ರಮಕೈಗೊಳ್ಳಬಹುದಾಗಿದೆ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಉದ್ಯಾನವನಗಳ

ಸರ್ವೆ ವರದಿಯಂತೆ ಒಂದು ಎಕರೆಗಿಂತ ಹೆಚ್ಚು ವಿಸ್ತೀರ್ಣವಿರುವ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸಲು ಟೆಂಡರ್ ಕರೆಯಲು ದಿನಾಂಕ 19–07–2011 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 54 ರಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗಿತ್ತು. ಈ ಕೆಳಕಂಡ 20 ಉದ್ಯಾನವನಗಳಿಗೆ ಮೊದಲನೇ ಹಂತವಾಗಿ ಸುತ್ತಲೂ ಬೇಸ್‌ಮೆಂಟ್ ಕಟ್ಟಡ ನಿರ್ಮಾಣ ಮಾಡಲು ಹಾಗೂ ನಾಮಫಲಕ ಅಳವಡಿಸಲು ಉದ್ದೇಶಿಸಿದ್ದು, ಈ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು ಒಟ್ಟು ರೂ.104.55 ಲಕ್ಷಗಳಿಗೆ ಕಾಮಗಾರಿಯನ್ನು ಕೈಗೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ಕ್ರ ಸಂ | ಗ್ರಾಮದ ಹೆಸರು | ಸರ್ವೆ ನಂಬರ್ | ಉದ್ಯಾನವನದ ವಿಸ್ತೀರ್ಣ | ಅಂದಾಜು ಮೊತ್ತ |
|---|---|---|---|---|
| 1 | ಶೆಟ್ಟಿಹಳ್ಳಿ | 9/1A,10,13/2, 11/1,2,3 10,10B | 51376 ಚ.ಅ | 470000 |
| 2 | ಶೆಟ್ಟಿಹಳ್ಳಿ | 62/3,4 | 56595 ಚ.ಅ | 465000 |
| 3 | ಮರಳೂರು | 20/2,19,1,4, | 52384 ಚ.ಅ | 440000 |
| 4 | ಮರಳೂರು | 67/1 | 19800 ಚ.ಅ | 285000 |
| 5 | ಶೆಟ್ಟಿಹಳ್ಳಿ | 49/2 | 29172 ಚ.ಅ | 340000 |
| 6 | ಗೆದ್ದಲಹಳ್ಳಿ | 24/12,33 | 109900 ಚ.ಅ | 685000 |
| 7 | ಮೆಳೇಕೋಟೆ–ವೀರಸಾಗರ | 20/7 | 82852 ಚ.ಅ | 600000 |
| 8 | ಮೆಳೇಕೋಟೆ–ವೀರಸಾಗರ | 23/4,23/5 | 139880 ಚ.ಅ | 750000 |
| 9 | ಮೆಳೇಕೋಟೆ–ವೀರಸಾಗರ | 23/1,17/6 | 63914 ಚ.ಅ | 570000 |
| 10 | ಮೆಳೇಕೋಟೆ–ವೀರಸಾಗರ | 25/2 | 43964 ಚ.ಅ | 680000 |
| 11 | ಕ್ಯಾತ್ಸಂದ್ರ | 59/1,2,3,4 | 68263 ಚ.ಅ | 740000 |
| 12 | ಮರಳೂರು | 86/1,2 | 44748 ಚ.ಅ | 435000 |
| 13 | ತುಮಕೂರು | 277 | 43210 ಚ.ಅ | 470000 |
| 14 | ಬಟವಾಡಿ | 31/1,4,26,27 | 44190 ಚ.ಅ | 470000 |
| 15 | ಉಪ್ಪಾರಹಳ್ಳಿ | 39/2, 40/1,2,3 | 61789 ಚ.ಅ | 530000 |
| 16 | ಸತ್ಯಮಂಗಲ | 279/2 | 44811 ಚ.ಅ | 550000 |
| 17 | ಮರಳೇನಹಳ್ಳಿ | 31/1, 31/8-17 | 90568 ಚ.ಅ | 825000 |
| 18 | ಉಪ್ಪಾರಹಳ್ಳಿ | 37/1 | 29767 ಚ.ಅ | 385000 |
| 19 | ತುಮಕೂರು | 60/1 | 24780 ಚ.ಅ | 385000 |
| 20 | ತುಮಕೂರು | 301/1, 302/1B | 30785 ಚ.ಅ | 380000 |
| | ಒಟ್ಟು | | | 10455000 |

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ವಿಷಯ ಸೂಚಿಯಲ್ಲಿರುವ ನಮೂದಿಸಿರುವ 20 ಉದ್ಯಾನವನಗಳಿಗೆ ನಿಯಮಾನುಸಾರ ಟೆಂಡರ್ ಕರೆದು ಕಾಮಗಾರಿಗಳನ್ನು ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 04** ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ಬೆಳಗುಂಬ, ವಡ್ಡರಹಳ್ಳಿ ಮತ್ತು ಮುತ್ಸಂದ್ರ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ವಸತಿ ಬಡಾವಣೆ ರಚಿಸುವ ಸಂಬಂಧ ಬೇಡಿಕೆ ಸಮೀಕ್ಷೆ ಹಾಗೂ ಯೋಜನಾ ವರದಿ ಸಿದ್ದಪಡಿಸುತ್ತಿರುವ TECSOK ಕಂಪನಿಯವರಿಗೆ ಉಳಿಕೆ ಮೊತ್ತ ಪಾವತಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 26-04-2011 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 39 ರ ನಿರ್ಣಯದಂತೆ ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ಬೆಳಗುಂಬ, ವಡ್ಡರಹಳ್ಳಿ ಮತ್ತು ಮುತ್ಸಂದ್ರ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ವಸತಿ ಬಡಾವಣೆ ರಚಿಸುವ ಸಂಬಂಧ ಸಮಗ್ರ ಯೋಜನಾ ವರದಿಯನ್ನು ಸಿದ್ದಪಡಿಸಲು ರೂ.3,00,000 ಗಳನ್ನು ಪಾವತಿಸಲು ಕರ್ನಾಟಕ ತಾಂತ್ರಿಕ ಸಲಹಾ ಸೇವಾ ಸಂಸ್ಥೆ (ಟೆಕ್ಸಾಕ್) ಸಂಸ್ಥೆ, ಬೆಂಗಳೂರು ರವರಿಗೆ ದಿನಾಂಕ 04-05-2011 ರಂದು ಕಾರ್ಯಾದೇಶ ನೀಡಲಾಗಿತ್ತು. ದಿನಾಂಕ 21-05-2011 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 77 ರ ನಿರ್ಣಯದಂತೆ ರೂ.1,50,000 ಗಳನ್ನು ದಿನಾಂಕ 31-05-2011 ರಂದು ಮುಂಗಡ ಹಣವಾಗಿ ಪಾವತಿಸಲಾಗಿತ್ತು.

ಸದರಿ ಸಂಸ್ಥೆಯು ದಿನಾಂಕ 08-08-2011 ರಂದು ಸಮಗ್ರ ಯೋಜನಾ ವರದಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತದೆ. ಯೋಜನಾ ವರದಿಯನ್ನು ಸಭೆಯ ಮುಂದೆ ಸಲ್ಲಿಸಿದೆ. ಉಳಿಕೆ ಮೊತ್ತ ರೂ.1,50,000 ಗಳಿಗೆ ಶೇಕಡ 10.3 ರಂತೆ ಸೇವಾ ಶುಲ್ಕ (ಮೂರು ಲಕ್ಷಗಳಿಗೆ) ಪಾವತಿಸುವ ಬಗ್ಗೆ ವಿಷಯವನ್ನು ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಕರ್ನಾಟಕ ತಾಂತ್ರಿಕ ಸಲಹಾ ಸೇವಾ ಸಂಸ್ಥೆ (ಟೆಕ್ಸಾಕ್) ಸಂಸ್ಥೆ, ಬೆಂಗಳೂರು ಇವರು ಯೋಜನಾ ವರದಿಯನ್ನು ಸಲ್ಲಿಸಿರುವುದನ್ನು ಪರಿಶೀಲಿಸಿ, ಸದರಿ ಸಂಸ್ಥೆಗೆ ಬಾಕಿ ಇರುವ ಮೊತ್ತವನ್ನು ಕರಾರಿನಲ್ಲಿನ ಷರತ್ತಿನಂತೆ ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 05** ತುಮಕೂರು ನಗರದ ಬೆಳಗುಂಬ ಗ್ರಾಮದ ಸರ್ವೆ ನಂಬರ್ 11/2ಸಿ4 ರಲ್ಲಿ 0-21 ಗುಂಟೆ ಜಾಗಕ್ಕೆ ವಸತಿ ಉದ್ದೇಶಕ್ಕೆ ವಿಭಜಿತ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ವಿ.ಎಂ.ರಂಗನಾಥ ಎಂಬುವವರು ತುಮಕೂರು ನಗರದ ಬೆಳಗುಂಬ ಗ್ರಾಮದ ಸರ್ವೆ ನಂಬರ್ 11/2ಸಿ4 ರಲ್ಲಿ 0–21 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಕೋರಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ ಎಎಲ್ಎನ್(ಟಿಎಂಕೆ)/ಸಿಆರ್/407/2010–11 ದಿನಾಂಕ 05–04–2011 ರಂತೆ ವಾಸದ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ. ಸದರಿ ಪ್ರದೇಶಕ್ಕೆ ರಸ್ತೆ ಸಂಪರ್ಕವಿರುತ್ತದೆ. ಪರಿಷ್ಕೃತ ಮಹಾಯೋಜನೆ ವಸತಿ ವಲಯಕ್ಕೆ ಕಾಯ್ದಿರಿಸಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ/522/ಮೈಅಪ್ರಾ/ 2005 ದಿನಾಂಕ 10–03–2006 ರಂತೆ ವಿನ್ಯಾಸದ ವಿಸ್ತೀರ್ಣ 4000 ಚದುರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ನಿವೇಶನಕ್ಕಾಗಿ ಮೀಸಲಿರಿಸಬೇಕಾದ ಪ್ರದೇಶದ ಮಾರುಕಟ್ಟೆ ಶುಲ್ಕ ಪಾವತಿಸಿಕೊಂಡು ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ನಿವೇಶನದಿಂದ ವಿನಾಯಿತಿ ನೀಡಿ ಪ್ರಾಧಿಕಾರದ ನಿರ್ಣಯದಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ವಿನ್ಯಾಸದ ಮಾಲೀಕರು ಸ್ವಂತ ಖರ್ಚಿನಿಂದ ನಿರ್ವಹಿಸುವ ಷರತ್ತಿಗೆ ಒಳಪಟ್ಟು ವಿಭಜಿತ ವಿನ್ಯಾಸ ಅನುಮೋದನೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಸೂಕ್ತ ನಿರ್ಣಯಕ್ಕಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಸ್ಥಳ ಪರಿಶೀಲನೆಯಂತೆ, ಪ್ರಸ್ತಾವಿತ ಪ್ರದೇಶಕ್ಕೆ ರಸ್ತೆ ಸಂಪರ್ಕವಿದ್ದು, ಪರಿಷ್ಕೃತ ಮಹಾಯೋಜನೆ 2031 ರಂತೆ ಪ್ರಸ್ತಾವಿತ ಪ್ರದೇಶವು ವಸತಿ ವಲಯದಲ್ಲಿ ಬರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪ್ರಸ್ತಾವಿತ ಪ್ರದೇಶಕ್ಕೆ ಭೂಪರಿವರ್ತನೆಯಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ / 522 / ಮೈಅಪ್ರಾ / 2005 ದಿನಾಂಕ 10–03–2006 ರಂತೆ ಪ್ರಸ್ತಾವಿತ ಪ್ರದೇಶಕ್ಕೆ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ವಿಭಜಿತ ನಿವೇಶನ ವಿನ್ಯಾಸ ಅನುಮೋದನೆ ನೀಡಬಹುದಾಗಿರುತ್ತದೆ.

**ತೀರ್ಮಾನ** ಸದರಿ ವಿಷಯವನ್ನು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಅರ್ಜಿದಾರರಾದ ಶ್ರೀ ವಿ.ಎಂ.ರಂಗನಾಥ ಎಂಬುವವರು ತುಮಕೂರು ನಗರದ ಬೆಳಗುಂಬ ಗ್ರಾಮದ ಸರ್ವೆ ನಂಬರ್ 11/2ಸಿ4 ರಲ್ಲಿ 0–21 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಕೋರಿರುವ ವಿಷಯವನ್ನು ಪರಿಗಣಿಸಿ, ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ಅರ್ಜಿದಾರರೇ ಸ್ವಂತ ಖರ್ಚಿನಿಂದ ನಿರ್ವಹಿಸುವ

ಷರತ್ತಿಗೆ ಒಳಪಟ್ಟು ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 06** ತುಮಕೂರು ನಗರದ ಬೆಳಗುಂಬ ಗ್ರಾಮದ ಸರ್ವೆ ನಂಬರ್ 11/2ಸಿ1 ರಲ್ಲಿ 0–13 ಗುಂಟೆ ಜಾಗಕ್ಕೆ ವಸತಿ ಉದ್ದೇಶಕ್ಕೆ ವಿಭಜಿತ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ಟಿ.ಹೆಚ್.ನಾಗಭೂಷಣ್ ಎಂಬುವವರು ತುಮಕೂರು ನಗರದ ಬೆಳಗುಂಬ ಗ್ರಾಮದ ಸರ್ವೆ ನಂಬರ್ 11/2ಸಿ1 ರಲ್ಲಿ 0–13 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಕೋರಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ ಎಎಲ್ಎನ್(ಟಿಎಂಕೆ)/ಸಿಆರ್/404/2010–11 ದಿನಾಂಕ 06–04–2011 ರಂತೆ ವಾಸದ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ. ಸದರಿ ಪ್ರದೇಶಕ್ಕೆ ರಸ್ತೆ ಸಂಪರ್ಕವಿರುತ್ತದೆ. ಪರಿಷ್ಕೃತ ಮಹಾಯೋಜನೆ ವಸತಿ ವಲಯಕ್ಕೆ ಕಾಯ್ದಿರಿಸಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ/522/ಮೈಅಪ್ರಾ/ 2005 ದಿನಾಂಕ 10–03–2006 ರಂತೆ ವಿನ್ಯಾಸದ ವಿಸ್ತೀರ್ಣ 4000 ಚದುರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ನಿವೇಶನಕ್ಕಾಗಿ ಮೀಸಲಿರಿಸಬೇಕಾದ ಪ್ರದೇಶದ ಮಾರುಕಟ್ಟೆ ಶುಲ್ಕ ಪಾವತಿಸಿಕೊಂಡು ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ನಿವೇಶನದಿಂದ ವಿನಾಯಿತಿ ನೀಡಿ ಪ್ರಾಧಿಕಾರದ ನಿರ್ಣಯದಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ವಿನ್ಯಾಸದ ಮಾಲೀಕರು ಸ್ವಂತ ಖರ್ಚಿನಿಂದ ನಿರ್ವಹಿಸುವ ಷರತ್ತಿಗೆ ಒಳಪಟ್ಟು ವಿಭಜಿತ ವಿನ್ಯಾಸ ಅನುಮೋದನೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಸೂಕ್ತ ನಿರ್ಣಯಕ್ಕಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಸ್ಥಳ ಪರಿಶೀಲನೆಯಂತೆ, ಪ್ರಸ್ತಾವಿತ ಪ್ರದೇಶಕ್ಕೆ ರಸ್ತೆ ಸಂಪರ್ಕವಿದ್ದು, ಪರಿಷ್ಕೃತ ಮಹಾಯೋಜನೆ 2031 ರಂತೆ ಪ್ರಸ್ತಾವಿತ ಪ್ರದೇಶವು ವಸತಿ ವಲಯದಲ್ಲಿ ಬರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪ್ರಸ್ತಾವಿತ ಪ್ರದೇಶಕ್ಕೆ ಭೂಪರಿವರ್ತನೆಯಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ / 522 / ಮೈಅಪ್ರಾ / 2005 ದಿನಾಂಕ 10–03–2006 ರಂತೆ ಪ್ರಸ್ತಾವಿತ ಪ್ರದೇಶಕ್ಕೆ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ವಿಭಜಿತ ನಿವೇಶನ ವಿನ್ಯಾಸ ಅನುಮೋದನೆ ನೀಡಬಹುದಾಗಿರುತ್ತದೆ.

**ತೀರ್ಮಾನ** ಸದರಿ ವಿಷಯವನ್ನು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಅರ್ಜಿದಾರರಾದ ಶ್ರೀ ಟಿ.ಹೆಚ್.ನಾಗಭೂಷಣ್ ಎಂಬುವವರು

ತುಮಕೂರು ನಗರದ ಬೆಳಗುಂಬ ಗ್ರಾಮದ ಸರ್ವೆ ನಂಬರ್ 11/2ಸಿ1 ರಲ್ಲಿ 0–13 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಕೋರಿರುವ ವಿಷಯವನ್ನು ಪರಿಗಣಿಸಿ, ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ಅರ್ಜಿದಾರರೇ ಸ್ವಂತ ಖರ್ಚಿನಿಂದ ನಿರ್ವಹಿಸುವ ಷರತ್ತಿಗೆ ಒಳಪಟ್ಟು ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 07** ತುಮಕೂರು ಅಮಾನಿಕೆರೆ ಗ್ರಾಮದ ಸರ್ವೆ ನಂಬರ್ 13/1 ರಲ್ಲಿ 2–31 ಗುಂಟೆ, 43 ರಲ್ಲಿ 4 ಎಕರೆ 39 ಗುಂಟೆ, 251 ರಲ್ಲಿ 2 ಎಕರೆ 01 ಗುಂಟೆ, 249 ರಲ್ಲಿ 5 ಎಕರೆ 15 ಗುಂಟೆ, 250 ರಲ್ಲಿ 2 ಎಕರೆ 24 ಗುಂಟೆ ಜಮೀನುಗಳಿಗೆ ಭೂ ಪರಿವರ್ತನೆಗೆ ನಿರಾಕ್ಷೇಪಣಾ ಪತ್ರ ನೀಡಲು ಕೋರಿರುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ಡಿ.ಎಲ್.ರಾಜು, ಎಂ.ತಗತರಾಜು, ಗೋವಿಂದಸ್ವಾಮಿ, ಸುಕುಲಬಾಯಿ, ಜಿ.ಕೇಶವಮೂರ್ತಿ, ದಿನೇಶ್‌ಜೈನ್ ಮತ್ತು ಡಿ.ಆರ್.ಶ್ರೀನಾಥ್ ಇವರುಗಳು ಪ್ರಾಧಿಕಾರದ ಅಧ್ಯಕ್ಷರಿಗೆ ಅರ್ಜಿ ಸಲ್ಲಿಸಿ, ಸದರಿ ಜಮೀನುಗಳಿಗೆ ಭೂ ಪರಿವರ್ತನೆಗೆ ನಿರಾಕ್ಷೇಪಣಾ ಪತ್ರ ನೀಡಲು ಕೋರಿರುತ್ತಾರೆ. ಮಾನ್ಯ ಅಧ್ಯಕ್ಷರು ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲು ಸೂಚಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನುಗಳು ಪ್ರಾಧಿಕಾರದ ಉದ್ದೇಶಿತ ವಸತಿ ಯೋಜನೆಗೆ ಒಳಪಟ್ಟಿರುತ್ತವೆ. ಉದ್ದೇಶಿತ ವಸತಿ ಯೋಜನೆಗೆ ಒಳಪಟ್ಟಿರುವ ಜಮೀನುಗಳಿಗೆ ಭೂ ಪರಿವರ್ತನೆಗೆ ನಿರಾಕ್ಷೇಪಣಾ ಪತ್ರ ನೀಡಬಾರದೆಂದು ದಿನಾಂಕ 27–07–2006 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 14 ರ ನಿರ್ಣಯದನ್ವಯ ತೀರ್ಮಾನಿಸಲಾಗಿರುತ್ತದೆ ಹಾಗೂ ಈ ಪೈಕಿ ತುಮಕೂರು ಅಮಾನಿಕೆರೆ ಗ್ರಾಮದ ಸರ್ವೆ ನಂಬರ್ 44, 48, 49, 50, 51, 52, 53, 54, 55, 56, 63, 248 ರ 34 ಎಕರೆ 15 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಬಡಾವಣೆ ನಿರ್ಮಿಸುವ ಸಂಬಂಧ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಅನುಮೋದನೆ ನಿರೀಕ್ಷಿಸಲಾಗಿರುತ್ತದೆ.

ಪ್ರಸ್ತಾವಿತ ಜಮೀನುಗಳನ್ನು ಉದ್ದೇಶಿತ ವಸತಿ ಯೋಜನೆಯಿಂದ ಕೈಬಿಟ್ಟಲ್ಲಿ ಪ್ರಾಧಿಕಾರದಿಂದ ಕೈಗೊಳ್ಳಲು ಉದ್ದೇಶಿಸಿರುವ ಶೆಟ್ಟಿಹಳ್ಳಿ, ಬಡ್ಡಿಹಳ್ಳಿ, ಕ್ಯಾತ್ಸಂದ್ರ, ತುಮಕೂರು ಕಸಬಾ, ತುಮಕೂರು ಅಮಾನಿಕೆರೆ, ದಿಬ್ಬೂರು ಗ್ರಾಮಗಳ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಕಷ್ಟವಾಗಿರುತ್ತದೆ. ಇದರಿಂದ ಪ್ರಾಧಿಕಾರದ ವತಿಯಿಂದ ಬಡಾವಣೆ ನಿರ್ಮಿಸಿ, ಸಾರ್ವಜನಿಕರಿಗೆ ನಿವೇಶನ ಹಂಚುವ ಪ್ರಕ್ರಿಯೆಗೆ ಅಡ್ಡಿಯಾಗುತ್ತದೆ. ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ದಿನಾಂಕ 27-07-2006 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ವಿಷಯ ಸಂಖ್ಯೆ 14 ರ ನಿರ್ಣಯದಂತೆ ಕೈಗೊಳ್ಳಲಾದ ತೀರ್ಮಾನದಂತೆ ಇದುವರೆವಿಗೂ ಭೂಸ್ವಾಧೀನ ಪಡಿಸಿಕೊಳ್ಳುವ ಸಂಬಂಧ ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದನ್ನು ಪರಿಗಣಿಸಲಾಯಿತು. ಆಯುಕ್ತರು ತುಮಕೂರು ಅಮಾನಿಕೆರೆ ಗ್ರಾಮದ ಸರ್ವೆ ನಂಬರ್ 44, 48, 49, 50, 51, 52, 53, 54, 55, 56, 63, 248 ಗಳಲ್ಲಿ 35 ಎಕರೆ ವಿಸ್ತೀರ್ಣದ ಪ್ರದೇಶಕ್ಕೆ ಈಗಾಗಲೇ ರೈತರ ಒಪ್ಪಿಗೆ ಮೇರೆಗೆ ರೈತರ ಸಹಭಾಗಿತ್ವದಲ್ಲಿ ವಸತಿ ಯೋಜನೆ ಕೈಗೊಳ್ಳಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿಗಾಗಿ ಸಲ್ಲಿಸಿದ್ದು, ಮಂಜೂರಾತಿಯನ್ನು ನಿರೀಕ್ಷಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಅಧ್ಯಕ್ಷರು ಮಾತನಾಡಿ 35 ಎಕರೆ ಪ್ರದೇಶವನ್ನು ಹೊರತು ಪಡಿಸಿ ಉಳಿಕೆ ಪ್ರದೇಶದಲ್ಲಿ ಯಾವುದೇ ಒಡಂಬಡಿಕೆ ಅಥವಾ ಭೂಸ್ವಾಧೀನ ಸಂಬಂಧ 17(1) ರ ಅಧಿಸೂಚನೆ ಹೊರಡಿಸುವುದು ಇತ್ಯಾದಿ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲದಿರುವುದರಿಂದ ಹಾಗೂ 2006 ರಿಂದ ಇದುವರೆವಿಗೂ ರೈತರು ಜಮೀನುಗಳಿಗೆ ಮಾರಾಟಕ್ಕೆ ಭೂ ಪರಿವರ್ತನೆಗೆ ನಿರ್ಬಂಧ ವಿಧಿಸಿರುವುದರಿಂದ ಸಾಕಷ್ಟು ರೈತರುಗಳು ಸಂಕಷ್ಟ ಅನುಭವಿಸುತ್ತಿರುವುದರಿಂದ ಪ್ರಸ್ತುತ ಸರ್ಕಾರದ ಅನುಮೋದನೆಗೆ ಸಲ್ಲಿಸಿರುವ ವಸತಿ ಯೋಜನೆ ಪ್ರದೇಶ ಹೊರತುಪಡಿಸಿ ಉಳಿಕೆ ಪ್ರದೇಶಗಳಿಗೆ ಭೂಪರಿವರ್ತನೆಗೆ ವಿಧಿಸಿರುವ ನಿರ್ಬಂಧವನ್ನು ತೆರವುಗೊಳಿಸಲು ಸೂಕ್ತವೆಂದು ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ನಗರ ಯೋಜನಾ ಸದಸ್ಯರು ಸರ್ಕಾರವು ರೈತರ ಸಹಭಾಗಿತ್ವದ 35 ಎಕರೆ ಯೋಜನೆಗೆ ಒಪ್ಪಿಗೆ ನೀಡಿದಲ್ಲಿ, ಮುಂದೆ ಈ ಭೂಪ್ರದೇಶದ ರೈತರುಗಳು ವಸತಿ ಉದ್ದೇಶಕ್ಕೆ ಮುಂದೆ ಬರುವುದಿಲ್ಲವಾದುದರಿಂದ ಕೋರಿಕೆಯಂತೆ ನಿರಾಕ್ಷೇಪಣಾ ಪತ್ರ ನೀಡುವುದು ಸೂಕ್ತವಾಗುವುದಿಲ್ಲ ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಇದಕ್ಕೆ ಆಯುಕ್ತರು ಸಹಮತ ವ್ಯಕ್ತಪಡಿಸಿದರು. ಈ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ಚರ್ಚಿಸಿ, 2006 ರಿಂದ ಇದುವರೆವಿಗೂ ಯಾವುದೇ ಕ್ರಮವಾಗಿರುವುದಿಲ್ಲ. ಉದ್ದೇಶಿತ ವಸತಿ ಯೋಜನೆಯ ಭೂ ಪ್ರದೇಶ ತುಮಕೂರು ಅಮಾನಿಕೆರೆಯ ಹಿಂಭಾಗದ ಅಚ್ಚುಕಟ್ಟು ಪ್ರದೇಶವಾಗಿದ್ದು, ತಗ್ಗು ಪ್ರದೇಶವಾಗಿರುತ್ತದೆ. ಇಲ್ಲಿ ಪ್ರಾಧಿಕಾರದಿಂದ ವಸತಿ ಬಡಾವಣೆ ನಿರ್ಮಿಸುವುದು ತಾಂತ್ರಿಕವಾಗಿ ಅಧಿಕ ಯೋಜನಾ ವೆಚ್ಚದ ಯೋಜನೆಯಾಗಿರುತ್ತದೆ. ಈ ಪ್ರದೇಶದಲ್ಲಿ ಮಾರುಕಟ್ಟೆ ಬೆಲೆ ಅಧಿಕವಾಗಿದ್ದು, ರೈತರ ಸಹಭಾಗಿತ್ವದಲ್ಲಿ ಯೋಜನೆ ನಿರ್ಮಿಸಿದರು ಸಹ ರಿಯಾಯಿತಿ ದರದಲ್ಲಿ ಮಧ್ಯಮ ವರ್ಗದವರಿಗೆ ನಿವೇಶನ ನೀಡುವುದು ಕಷ್ಟ ಸಾಧ್ಯವಾಗುತ್ತದೆಂದು ಅಧ್ಯಕ್ಷರು ಹಾಗೂ ಸದಸ್ಯರುಗಳು ಅಭಿಪ್ರಾಯಪಟ್ಟರು. ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ, 2006ನೇ ಇಸವಿಯಿಂದ ಇಲ್ಲಿಯವರೆವಿಗೂ ಯಾವುದೇ ನಿರೀಕ್ಷಿತ ಪ್ರಗತಿ ಸಾಧಿಸಿಲ್ಲದ ಕಾರಣ ನಿರ್ಬಂಧವನ್ನು ತೆರವುಗೊಳಿಸಲು ಸಭೆಯು ಬಹುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 08** ತುಮಕೂರು ನಗರದ ಬೆಳಗುಂಬ ಗ್ರಾಮದ ಸರ್ವೆ ನಂಬರ್ 112/1ಬಿ ರಲ್ಲಿ ವಿಸ್ತೀರ್ಣ 0–19 ಗುಂಟೆ ಪ್ರದೇಶದಲ್ಲಿ ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ತುಮಕೂರು ನಗರದ ಬೆಳಗುಂಬ ಗ್ರಾಮದ ಸರ್ವೆ ನಂಬರ್ 112/1ಬಿ ರಲ್ಲಿ ವಿಸ್ತೀರ್ಣ 0–19 ಗುಂಟೆ ಜಮೀನಿಗೆ ಪ್ರಾಧಿಕಾರದ ದಿನಾಂಕ 13–01–2009 ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 29 ರ ನಿರ್ಣಯದನ್ವಯ ಸದರಿ ಜಮೀನಿಗೆ ವಿನ್ಯಾಸ ಅನುಮೋದನೆ ನೀಡಿ ಈ ಕಛೇರಿಯ ವಿನ್ಯಾಸ ಅನುಮೋದನೆ ಸಂಖ್ಯೆ ಟಿಯುಡಿಎ/ಎಲ್‌ಎಒ/90/2008–09 ದಿನಾಂಕ 06–03–2009 ರನ್ವಯ ಶೇಕಡ 60 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿತ್ತು ಅರ್ಜಿದಾರರು ನಿರ್ವಹಿಸಬೇಕಾದ ಅಗತ್ಯ ಕಾಮಗಾರಿಗಳಾದ ಡಾಂಬರೀಕರಿಸಿದ ರಸ್ತೆ, ಕಲ್ಲು ಚಪ್ಪಡಿ ಚರಂಡಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ವಿದ್ಯುತ್ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಿದ್ದು, ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದೆಂದು ಈ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಅಭಿಪ್ರಾಯ ನೀಡಿರುತ್ತಾರೆ. ಸದರಿ ಅಭಿಪ್ರಾಯದನ್ವಯ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಪ್ರಾಧಿಕಾರದ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಪ್ರಸ್ತಾವಿತ ಪ್ರದೇಶದ ಸ್ಥಳ ಪರಿಶೀಲನೆ ಮಾಡಲಾಯಿತು ಹಾಗೂ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ಅಂತಿಮ ಅನುಮೋದನೆಗೆ ಸಿದ್ದಪಡಿಸಿರುವ ವಿನ್ಯಾಸದಂತೆ ನಿವೇಶನಗಳನ್ನು ರಚಿಸಲಾಗಿರುತ್ತದೆ. ಆದ್ದರಿಂದ ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದು.

**ತೀರ್ಮಾನ** ಸದರಿ ವಿಷಯವನ್ನು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಬೆಳಗುಂಬ ಗ್ರಾಮದ ಸರ್ವೆ ನಂಬರ್ 112/1ಬಿ ರಲ್ಲಿ ವಿಸ್ತೀರ್ಣ 0–19 ಗುಂಟೆ ಜಮೀನಿನ ಅನುಮೋದಿತ ಬಡಾವಣೆಯಲ್ಲಿನ ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸಹಿ/–
ಅಧ್ಯಕ್ಷರು
ನಗರಾಭಿವೃದ್ಧಿ ಪ್ರಾಧಿಕಾರ
ತುಮಕೂರು.

– ನಕಲು –

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ
ತುಮಕೂರು.